# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-190, ಮಂಗಮ್ಮನಪಾಳ್ಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರವರ ತಿದ್ದುಪಡಿ ಆದೇಶ ಸಂಖ್ಯೆ: ಬಿ12(5)/ಪಿ.ಆರ್/35/2020-21 ದಿ: 02.10.2020ರ ಆದೇಶದಂತೆ ದಿನಾಂಕ: 23.11.2020 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಂಖ್ಯೆ 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ನೋಡಲ್ ಅಧಿಕಾರಿ ರವರ ಅಧ್ಯಕ್ಷೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಬೆಯಲ್ಲಿ ಹಾಜರಿದ್ದ ಸದಸ್ಯರು/ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ ಟಿ. ಹನುಮಂತರಾಯ | ಅಧ್ಯಕರು/ ನೋಡಲ್ ಅಧಿಕಾರಿಗಳು |
| 2 | ಶ್ರೀ ರವಿ ಡಿ | ಸಂಚಾಲಕರು/ ಕಾರ್ಯದರ್ಶಿಗಳು |
| 3 | ಶ್ರೀಮತಿ ಲಕ್ಷ್ಮೀ ಬಿ | ಸಹ ಕಂದಾಯ ಅಧಿಕಾರಿ |
| 4 | ಶ್ರೀ ಹೆಚ್.ಆರ್ ಚಂದ್ರಶೇಖರ | ತೋಟಗಾರಿಕೆ ಅಧೀಕ್ಷಕರು |
| 5 | ಶ್ರೀ ಸಾಯಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 6 | ಶ್ರೀ ಡಿ. ವಿಜಯಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ |
| 7 | ಶ್ರೀ ಹೊನ್ನೂರು ಪಾಷ | ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ ಸೈಯದ್ ಸಲಾಂ | ಸದಸ್ಯರು |
| 9 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 10 | ಶ್ರೀ ಉಮೇಶ್ ಎಸ್. | ಸದಸ್ಯರು |
| 11 | ಶ್ರೀ ಶಂಕರ.ಎನ್ | ಸದಸ್ಯರು |
| 12 | ಶ್ರೀ ನಾಗೇಂದ್ರ | ಸದಸ್ಯರು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಟಿ ಹನುಮಂತರಾಯ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಅಧ್ಯಕ್ಷರು ವಾರ್ಡ್ ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಪ್ರಸ್ತಾಪಿಸಲು ಕೋರಿದರು.

ಹಿಂದಿನ ಸಭಾ ನಡುವಾಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ ಇಂಜಿಯರಿಂಗ್, ಘನತ್ಯಾಜ್ಯ ನಿರ್ವಹಣೆ ಮತ್ತು ಕೋವಿಡ್-19 ತಂಡಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿ ರವರು ತಿಳಿಸಿದರು.

Scanned with Car

| ಕ್ರ ಸಂ | ವಿಷಯ | ತೀರ್ಮಾನ |
|---|---|---|
| 1 | **ಬಿ.ಬಿ.ಎಂ.ಪಿ (ವಿದ್ಯುತ್)** | ಹಿಂದಿನ ಸಭೆಯಲ್ಲಿ ತಿಳಿಸಿರುವ ವಿಷಯಗಳ ಬಗ್ಗೆ ಇಂದಿನ ಸಭೆಯಲ್ಲಿ ಸಹಾಯಕ ಅಭಿಯಂತರರು ವಿದ್ಯುತ್ ರವರಿಗೆ ವಾರ್ಡ್ ಸಮಿತಿಗೆ ಆಹ್ವಾನ ನೀಡಿದ್ದರು, ಸಭೆಗೆ ಗೈರು ಹಾಜರಾಗಿರುತ್ತಾರೆ. ಹಾಗೂ ಹಿಂದಿನ ಎರಡು ಸಭೆಗಳಿಗೆ ಗೈರು ಹಾಜರಾಗಿರುತ್ತಾರೆ ಇದರ ಬಗ್ಗೆ ಈಗಾಗಲೇ ಎಚ್ಚರಿಕೆ ನೀಡಿದ್ದರೂ ಸಹ ಇಂದಿನ ಸಭೆಗೆ ಹಾಜರಾಗಿರುವುದಿಲ್ಲ ಆದ್ದರಿಂದ ಸದರಿ ಅಭಿಯಂತರರಿಗೆ ನೋಟಿಸ್ ಜಾರಿ ಮಾಡಲು ಅಧ್ಯಕ್ಷರು ಸೂಚಿಸಿದ್ದು, ದೂರವಾಣಿ ಮುಖಾಂತರ ಕರೆ ಮಾಡಿದ್ದು, ಬೇರೆ ಕೆಲಸ ನಿಮಿತ್ಯ ಸಭೆಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಖುದ್ದಾಗಿ ಸದಸ್ಯರ ಜೊತೆಗೆ ದೂರುಗಳನ್ನು ಪರಿಶೀಲಿಸುವುದಾಗಿ ಸಹಾಯಕ ಅಭಿಯಂತರರು ವಿದ್ಯುತ್‌ರವರು ತಿಳಿಸಿರುತ್ತಾರೆ. ಈ ವಿಷಯದ ಕುರಿತು ತುರ್ತಾಗಿ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ: ಸಹಾಯಕ ಅಭಿಯಂತರರು, ವಿದ್ಯುತ್** |
| 2 | **ಆರೋಗ್ಯ ಇಲಾಖೆ** | • ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಕ್ರಮಕೈಗೊಂಡಿರುವ ವರದಿ ನೀಡಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿತ್ತು, ಹಿಂದಿನ ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು ಗೈರು ಹಾಜರಾಗಿರುತ್ತಾರೆ. ಮುಂದುವರೆದಂತೆ ಸಭೆಯಲ್ಲಿ ಉಪಸ್ಥಿತ ಇದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಹಿಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ ಪ್ರದೇಶಗಳಲ್ಲಿ ಔಷದಿ ಸಿಂಪಡಿಸಲು ಸದಸ್ಯರು ಮತ್ತು ಅಧ್ಯಕ್ಷರ ಸೂಚಿಸಿದ್ದು, ಔಷದಿ ಸಿಂಪಡಿಸಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರಿಗೆ ಮುಂದಿನ ಸಭೆಯಲ್ಲಿ ಹಾಜರಾಗುವಂತೆ ವಾರ್ಡ್ ಸದಸ್ಯರಾದ ಸೈಯದ್ ಸಲಾಂ ರವರು ಕೋರಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಇರುವ ಅನಧಿಕೃತ ಎಷ್ಟು ಮಾಂಸದ ಮತ್ತು ಗುಜರಿ ಅಂಡಿಗಳಿಗೆ ತೆರವುಗೊಳಿಸಲಾಗಿದೆ ಎಂಬುದರ ಬಗ್ಗೆ ಸದಸ್ಯರು ವರದಿ ನೀಡಲು ಕೋರಿರುತ್ತಾರೆ. ಮಾಂಸದ ಅಂಗಡಿಗಳಿಗೆ ಸಹಾಯಕ ನಿರ್ದೇಶಕರು ಪಶುಸಂಗೋಪನೆ ರವರು ಪರವಾನಗಿ ನೀಡಿದ್ದು, ಸದರಿಯವರಿಗೆ ಪತ್ರವನ್ನು ಬರೆದು ಮಾಹಿತಿ ಪಡೆದುಕೊಳ್ಳಲಾಗುವುದೆಂದು ಕಿ.ಆ.ಪ ತಿಳಿಸಿರುತ್ತಾರೆ. ಈ ಬಗ್ಗೆ ಸಹಾಯಕ ನಿರ್ದೇಶಕರು ಪಶುಸಂಗೋಪನೆ ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು, ಪೋಲಿಸ್ ಸಿಬ್ಬಂದಿ ಮತ್ತು ಸದಸ್ಯರೊಂದಿಗೆ ಮಂಸದ ಅಂಡಿಗಳ ಪರಿಶೀಲನೆ ಮತ್ತು ಅನಧಿಕೃತವಾಗಿ ಇರುವ ಗುಜರಿ ಅಂಡಿಗಳನ್ನು ತೆರವುಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ನಡೆಯುವ ಸಂಡೇ ಬಜಾರ್‌ನ ಮಳಿಗೆಗಳನ್ನು ತೆರವುಗೊಳಿಸಲು ಸದಸ್ಯರು ತಿಳಿಸಿದ್ದು, ಈ ಬಗ್ಗೆ ಆರೋಗ್ಯ ಪರಿವೀಕ್ಷಕರು ಹಿರಿಯ/ಕಿರಿಯ ಪೋಲಿಸ್ ಸಿಬ್ಬಂದಿ ಮತ್ತು ಸದಸ್ಯರೊಂದಿಗೆ ತೆರವುಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ<br>**ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು,** |

Scanned with Car

| | | |
|---|---|---|
| 3 | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಸೂಚಿಸಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು ಕಟ್ಟಡಗಳಲ್ಲಿ ಕುಡಿಯುವ ನೀರಿನ ಮೀಟರ್‌ಗಳನ್ನು ಅಳವಡಿಸದೆ ಅನಧಿಕೃತವಾಗಿ ನೀರನ್ನು ಉಪಯೋಗಿಸುತ್ತಿದ್ದು, ಮನೆ ಮನೆಗಳಿಗೆ ನೋಟಿಸ್ ಜಾರಿ ಮಾಡಿದ್ದು, ನೀರಿನ ಬಿಲ್ ಪಾವತಿಸಿಲ್ಲವೆಂದರೆ ಅಂತಹ ಕಟ್ಟಡದ ವಿರುದ್ಧ ಬಿ.ಎಂ.ಟಿ.ಎಫ್. ನಲ್ಲಿ ದೂರು ದಾಖಲಿಸುವುದಾಗಿ ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ತಿಳಿಸಿರುತ್ತಾರೆ<br>• ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪರ್ಯಾಯ ರಸ್ತೆ ಮಾಡದೆ ಕಾಮಗಾರಿ ಕೈಗೆತ್ತಿಕೊಂಡು ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಓಡಾಡಲು ಇದರಿಂದ ಕಷ್ಟಕರವಾಗಿದ್ದ, ಸ್ಥಳೀಯರಿಗೆ ನೀರನ್ನು ಸ್ಥಗಿತಗೊಳಿಸಿದ್ದು, ಸದರಿ ನಿವಾಸಿಗಳಿಗೆ ಮೂತ್ರ ವಿಸರ್ಜನೆಗೆ ಅಲೆದಾಡುವ ಪರಿಸ್ಥಿರಿ ಬಂದಿರುವುದಾಗಿ, ಆ ನಂತರ ನೀರಿನ ಸಂಪರ್ಕ ಪಡೆಯಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಅನುಮತಿ ಕೇಳಿದರೆ ದೊಡ್ಡ ಮೊತ್ತವನ್ನು ಪಾವತಿಸಿಕೊಳ್ಳುತ್ತಿರುವ ಬಗ್ಗೆ ಸದಸ್ಯರಾದ ಸೈಯದ್ ಸಲಾಂ ರವರು ತಿಳಿಸಿರುತ್ತಾರೆ. ಈ ಬಗ್ಗೆ ಬಂಡೇಪಾಳ್ಯದ ವಿನಾಯಕ ಬಾರ್ ರಸ್ತೆ ಹತ್ತಿರ ಮಾಡಿರುವ ಮಾದರಿ, ರಸ್ತೆಯಲ್ಲಿ ವೆಟ್‌ಮಿಕ್ಸ್ ಹಾಕಿ ರೋಲ್ ಮಾಡಿಸಿ ರಸ್ತೆ ಮಾಡಿಸುವುದಾಗಿ ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ತಿಳಿಸಿರುತ್ತಾರೆ. ಇದರ ಬಗ್ಗೆ ಆದಷ್ಟು ಬೇಗೆ ಅಂದರೆ ಸುಮಾರು 10–15 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಉಜ್ವಲ್ ಫ್ಯಾಕ್ಟರಿಯಿಂದ ಹೊಸಪಾಳ್ಯದಲ್ಲಿ ರಸ್ತೆ ಅಗೆದಿದ್ದು, ಅದರ ಮೇಲ್ಭಾಗದಲ್ಲಿರುವ ಗುಂಡಿಗಳನ್ನು ಮುಚ್ಚಲು ಸದಸ್ಯರು ಕೋರಿದ್ದು, ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆ ಮೂಲಭೂತ ಸೌಕರ್ಯ ಅಭಿಯಂತರರು ಕ್ರಮ ತೆಗೆದು ಕೊಳ್ಳುತ್ತಿದ್ದಾರೆಂದು ತಿಳಿಸಿರುತ್ತಾರೆ, ಈ ಬಗ್ಗೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ತಿಳಿಸಿರುತ್ತಾರೆ.<br>ಕ್ರಮ : ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | **ಕಂದಾಯ ವಿಭಾಗ** | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಸದಸ್ಯರು ಮತ್ತು ಅಧ್ಯಕ್ಷರು ಸೂಚಿಸಿದ್ದು, ಸದರಿ ವಿಷಯಗಳ ಬಗ್ಗೆ ದಾಖಲಾತಿಗಳ ಪರಿಶೀಲನೆ ನಡೆಯುತ್ತಿದ್ದು, ಕ್ರಮ ವಹಿಸಲಾಗುತ್ತಿದೆ ಎಂದು ಸ.ಕಂ.ಅ. ಹೆಚ್.ಎಸ್.ಆರ್ ಉಪವಿಭಾಗ ರವರು ತಿಳಿಸಿರುತ್ತಾರೆ.<br>**ಕ್ರಮ:– ಸಹಯಕ ಕಂದಾಯ ಅಧಿಕಾರಿಗಳು** |
| 5 | **ಬೆಸ್ಕಾಂ ಇಲಾಖೆ** | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಸದಸ್ಯರು ಮತ್ತು ಅಧ್ಯಕ್ಷರು ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಕೋರಿರುತ್ತಾರೆ.<br>ಈ ಬಗ್ಗೆ ಸ.ಅ. ಬೆಸ್ಕಾಂ ರವರು ಕ್ರಮ ವಹಿಸಲಾಗಿದೆ ಎಂದು ತಿಳಿಸಿರುತ್ತಾರೆ, ಹಾಗೂ ಉಜ್ವಾಲ್ ಫ್ಯಾಕ್ಟರಿ ಹತ್ತಿರ ಕಂಬ ವಾಲಿಕೊಂಡಿರುವುದನ್ನು ತೆರವುಗೊಳಿಸಲು ಸದಸ್ಯರಾದ ಶ್ರೀನಿವಾಸ ರೆಡ್ಡಿ ರವರು ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸ.ಅ.ಬೆಸ್ಕಾಂ ರವರು ತಿಳಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ಬೆಸ್ಕಾಂ.** |
| 6 | **ತೋಟಗಾರಿಕೆ ಇಲಾಖೆ.** | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಸದಸ್ಯರು ಮತ್ತು ಅಧ್ಯಕ್ಷರು ಸೂಚಿಸಿದ್ದು, ತೋಟಗಾರಿಕೆ ಅಧೀಕ್ಷಕರು, ಐ.ಟಿ.ಐ ಬಡಾವನೆ ಕುವೆಂಪು ಉದ್ಯಾನವನದ ಕಾಮಗಾರಿಯನ್ನು ಯೋಜನೆ ವಿಭಾಗದಿಂದ ನಿರ್ವಹಿಸುತ್ತಿದ್ದಾರೆ ಕಾಮಗಾರಿ ಪ್ರಗತಿಯಲ್ಲಿದ್ದು, ಹಾಗೂ ಸುತ್ತಮುತ್ತಲಿನ |

Scanned with Car

| | | |
|---|---|---|
| | | ತುಂಬಿರುವ ಹುಲ್ಲನ್ನು ಕತ್ತರಿಸಲು ಕ್ರಮವಹಿಸಲಾಗುವುದೆಂದು ತಿಳಿಸಿರುತ್ತಾರೆ. ಹಾಗೂ ಅಲ್ಲಿರುವ ಅವಶೇಷಗಳು ಕಾಮಗಾರಿ ಇಲಾಖೆಯಿಂದ ತೆರವುಗೊಳಿಸಿದ ನಂತರ ಶ್ರೀಘ್ರದಲ್ಲಿ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಿಕೊಂಡು ಗಿಡಗಳನ್ನು ನೆಟ್ಟು, ಉದ್ಯಾನವನ್ನು ನಿರ್ವಹಣೆ ಮಾಡುವುದಾಗಿ ತಿಳಿಸಿರುತ್ತಾರೆ.<br>• ಸದರಿ ಉದ್ಯಾನವನದಲ್ಲಿ ತೋಟಗಾರಿಕೆ ಅಧೀಕ್ಷಕರಿಗೆ ಮೀಸಲಿಟ್ಟಿರುವ ಕೊಠಡಿಯನ್ನು ತೋಟಗಾರಿಕೆ ಕಾವಲುದಾರರು, ಅಲ್ಲೆ 10-12 ವರ್ಷಗಳಿಂದ ವಾಸ್ತವಾಗಿ ಮಾಡಿಕೊಂಡಿದ್ದು, ಅವರ ವರ್ಗಾವಣೆ ಮಾಡಲು ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳವುದಾಗಿ ತೋಟಗಾರಿಕೆ ಅಧೀಕ್ಷಕರು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಹೊಸಪಾಳ್ಯ ಉದ್ಯಾನವನದಲ್ಲಿ ತೋಟದ ಮನೆಯಲ್ಲಿ ಗಿಡ-ಹಣ್ಣುಗಳನ್ನು ಬೇಳೆಯುತ್ತಿದ್ದು, ಅದನ್ನು ತೋಟಗಾರಿಕೆ ಕಾವಲುಗಾರ ಮಾರಾಟ ಮಾಡುತ್ತಿರುವುದನ್ನು ಕೇಳಿಬಂದಿರುತ್ತದೆ ಎಂದು ಸದಸ್ಯರು ತಿಳಿಸಿದ್ದು, ಹೊಸಪಾಳ್ಯ ಉದ್ಯಾನವವನ್ನು ಮಿನಿ ಲಾಲ್‌ಬಾಗ್/ಸೈಕಲ್ ಪಾರ್ಕ್ ಮಾಡುವುದಾಗಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಅದರ ನೀಲಿ ನಕ್ಷೆಯು ಲಭ್ಯವಿದ್ದು, ಕ್ರಮ ವಹಿಸಲು ಸದಸ್ಯರು ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳವುದಾಗಿ ತೊ.ಅ. ತಿಳಿಸಿರುತ್ತಾರೆ. |
| 7 | **ಕಾಮಗಾರಿ** | ವಾರ್ಡ್ ವ್ಯಾಪ್ತಿಯ ಗಾರ್ವೆಭಾವಿಪಾಳ್ಯ ಸರ್ಕಲ್‌ಯಿಂದ ಮುನೇಶ್ವರ ಸರ್ಕಲ್ ವರೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕಾಮಗಾರಿ ಪೂರ್ಣಗೊಂಡಿದ್ದು, ರಸ್ತೆ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ಸದಸ್ಯರು ತಿಳಿಸಿರುತ್ತಾರೆ. ಹಾಗೂ 6ನೇ ಮತ್ತು 7ನೇ ಅಡ್ಡ ರಸ್ತೆ ಲಕ್ಷ್ಮೀ ಬಡಾವಣೆಯ ಮಾರ್ಗವನ್ನು ಸರ್ವೆಯರ್ ರಿಂದ ಸರ್ವೆ ಮಾಡಿಸಲು ಕೋರಿರುತ್ತಾರೆ. ಸ.ಕಂ.ಅ. ರವರಿಗೆ ಪತ್ರವನ್ನು ಬರೆಯುವುದಾಗಿ ಸ.ಅ. ವಾರ್ಡ್ ಸಂ. 190 ರವರು ತಿಳಿಸಿರುತ್ತಾರೆ.<br>ಮಂಗಮ್ಮಪಾಳ್ಯ ಮುನಿಯಪ್ಪ ಕಾಂಪ್ಲೇಕ್ಸ್ ಮತ್ತು ಹೊಸಪಾಳ್ಯದ ಮುಖ್ಯ ರಸ್ತೆಯ ದೊಡ್ಡ ರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿ ನಿವೇಶನವಿದ್ದು, ಅದನ್ನು ಡಿ.ಸಿ. ಭೂಸ್ವಾಧೀನ/ಟಿ.ಡಿ.ಆರ್, ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ, ಸ.ಕಾ.ಅ. ಹೆಚ್.ಎಸ್.ಆರ್ ಉಪವಿಭಾಗ ಹಾಗೂ ಸ.ಕಂ.ಅ. ಹೆಚ್.ಎಸ್.ಆರ್ ಉಪವಿಭಾಗ ರವರೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>ಕ್ರಮ ಸ.ಅ. ವಾರ್ಡ್ ಸಂ. 190. |

ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ. 190

ಅಧ್ಯಕ್ಷರು/ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 190

Scanned with Car

ಪ್ರತಿಯನ್ನು:-

1. ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು(ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
3. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಸಲ್ಲಿಸಿದೆ.
4. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

Scanned with Car